Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 98/2019

ಪ್ರಾ.ಸಾ. 1 ಚಾ.ಸಾ 1

| | | |
|---|---|---|
| ಹೆಸರು | : | ಲಕ್ಷ್ಮಿ |
| ಗಂಡನ ಹೆಸರು | : | ಮಲ್ಲಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ | : | ಬೆಂಗಳೂರು |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 09-01-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಮೃತ ಭಾಗಮ್ಮ ಇವರು ನನ್ನ ಮಗಳಾಗಿರುತ್ತಾರೆ. ಚಾಸಾ-7 ನನ್ನ ಗಂಡನಾಗಿರುತ್ತಾನೆ. ಆರೋಪಿತರ ಪರಿಚಯ ಇರುತ್ತದೆ. ಚಾಸಾ-11 ರಿಂದ 13 ರವರ ಪರಿಚಯ ಇರುತ್ತದೆ. ನನ್ನ ಮಗಳಾದ ಭಾಗಮ್ಮ ಇವರು ಜಮೀನು ಮತ್ತು ಕೂಲಿ ಕೆಲಸ ಮಾಡುತ್ತಿದ್ದಳು. ನಾಗರಾಜ ಎನ್ನುವ ಆರೋಪಿ ನನ್ನ ಮಗಳಿಗೆ ನನ್ನ ಪ್ರೀತಿ ಮಾಡು ಎಂದು ಹಿಂಸೆ ಮಾಡುತ್ತಿದ್ದ. ಉಳಿದ ಆರೋಪಿತರು 1ನೇ ಆರೋಪಿ ನಾಗರಾಜ ಎನ್ನುವನಿಗೆ ನೀನು ಪ್ರೀತಿ ಮಾಡುತ್ತಿಯಾ ಇಲ್ಲದಿದ್ದರೆ ಇಲ್ಲಿಂದ ನಿನ್ನನ್ನು ಎತ್ತಿ ಹಾಕಿಕೊಂಡು ಹೋಗುತ್ತೇವೆ ಎಂದು ಹೆದರಿಸಿರುತ್ತಾರೆ. ಈ ವಿಷಯ ನನ್ನ ತಂದೆ ತಾಯಿಗೆ ಗೊತ್ತಾದರೆ ನಮಗೆ ಹೊಡೆಯುತ್ತಾರೆ, ಬೈಯುತ್ತಾರೆ ಈಗೆಲ್ಲಾ ಮಾಡಬೇಡಿ ಎಂದು ಮೃತ ಭಾಗಮ್ಮ ನನ್ನ ಮಗಳು ಹೇಳಿರುತ್ತಾಳೆ. ಸದರಿ ವಿಷಯ ಭಾಗಮ್ಮ ನಮಗೆ ಹೇಳಿರುತ್ತಾಳೆ. ನನ್ನ ಮಗಳನ್ನು ನಾವು ಆರೋಪಿತರ ಕಿರುಕುಳ ತಪ್ಪಿಸುವುದಕ್ಕಾಗಿ ನಮ್ಮ ಮಗಳನ್ನು ಮುಂಬೈಗೆ ಹೋಗಿ ನಮ್ಮ ಸಂಬಂಧಿಕರ ಮನೆಗೆ ಹೋಗಿ ಬಿಟ್ಟಿರುತ್ತೇವೆ. ಈ ನಾಲ್ಕು ಜನ ಆರೋಪಿತರು ಬೊಂಬಾಯಿಗೆ ಹೋಗಿ ನನ್ನ ಮಗಳ ಭಾಗಮ್ಮಳನ್ನು ತೆಗೆದುಕೊಂಡು ಬೆಂಗಳೂರಿಗೆ ಹೋಗಿರುತ್ತಾರೆ. ಬೆಂಗಳೂರಿನ ರೈಲ್ವೆ ನಿಲ್ದಾಣದಲ್ಲಿ ಬಿಟ್ಟು ಹೋಗಿರುತ್ತಾರೆ. ಸಹ ಪ್ರಯಾಣಿಕರು ಫೋನ ತೆಗೆದುಕೊಂಡು ನನ್ನ ಮಗಳು ನಮಗೆ ಬೆಂಗಳೂರು ರೈಲ್ವೆ ನಿಲ್ದಾಣದಿಂದ ಫೋನ ಮಾಡಿರುತ್ತಾರೆ. ನಾವು

ಹೋಗಿ ನಮ್ಮ ಮಗಳನ್ನು ಕರೆದುಕೊಂಡು ಬಂದಿರುತ್ತೇವೆ. ನಾವು ಕರೆದುಕೊಂಡು ಬಂದ ಮೇಲೆ 15 ದಿನ ನಮ್ಮ ಮಗಳು ನಮ್ಮ ಹತ್ತಿರ ಇದ್ದಳು. ಪುನಃ ಆರೋಪಿತರು ಹಿಂಸೆ ಕೊಡುತ್ತಿದ್ದರಿಂದ ಅವರ ಹಿಂಸೆ ತಾಳಲಾರದೆ ಹತ್ತಿಗೆ ಹೊಡೆಯುವ ಕ್ರಿಮಿನಾಶಕ ಔಷಧಿಯನ್ನು ನಮ್ಮ ಮನೆಯಲ್ಲಿ ಸೇವಿಸಿರುತ್ತಾಳೆ. ಚಾಸಾ-11, 12 ಮತ್ತು ನಮ್ಮ ಮಾವ ಸೈದಪ್ಪ ಇವರು ಬಂದು ನನ್ನ ಮಗಳನ್ನು ಯಾದಗಿರಿ ಜಿಲ್ಲಾ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಮಗಳನ್ನು ರಾಯಚೂರಿಗೆ ತೆಗೆದುಕೊಂಡು ಹೋಗುತ್ತಿರುವಾಗ ಮಾರ್ಗ ಮಧ್ಯದಲ್ಲಿ ನನ್ನ ಮಗಳು ಮೃತಪಟ್ಟಿದ್ದರಿಂದ ಪುನಃ ನಾವು ಜಿಲ್ಲಾ ಸರಕಾರಿ ಆಸ್ಪತ್ರೆ ಯಾದಗಿರಿಗೆ ಬಂದಿರುತ್ತೇವೆ. ನಂತರ ದೂರು ಕೊಟ್ಟಿರುತ್ತೇನೆ. ಸದರಿ ಈಗ ನೋಡುತ್ತಿದ್ದು ಅದನ್ನು **ನಿ.ಪಿ.1** ಎಂದು ಗುರುತಿಸಲಾಯಿತು. ನಿ,ಪಿ.1 ನ್ನು ಕೊಟ್ಟ ಮೇಲೆ ವಡಗೇರಾ ಪೊಲೀಸರು ನಮ್ಮ ಮನೆಗೆ ಬಂದಿರುತ್ತಾರೆ. ಅಲ್ಲಿ ಕ್ರಿಮಿನಾಶಕ ಔಷಧಿ ಸಿಂಪಡಿಸುವ ಡಬ್ಬಿ ನೋಡಿ ಅಲ್ಲಿ ಭಾವಚಿತ್ರ ತೆಗೆದುಕೊಂಡು ಬಂದಿರುತ್ತಾರೆ. ಸದರಿ ಡಬ್ಬಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗ ಈಗ ಸದರಿ ಡಬ್ಬಿಯನ್ನುತೋರಿಸಲಾಗಿದ್ದು ಅದನ್ನು ನೋಡಿ ಗುರುತಿಸಿದ್ದು ಅದನ್ನು **ಮು.ಮಾ.1** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ.ಸಿ.ಎಸ್.ಎಮ್. ವಕೀಲರಿಂದ</u>

2. ನನಗೆ ಓದಲು ಬರೆಯಲು ಬರುವುದಿಲ್ಲ. ನಿ.ಪಿ.1 ನ್ನು ವಡಗೇರಾ ಪೊಲೀಸರು ಬರೆದಿರುತ್ತಾರೆ. ನಿ.ಪಿ.1 ನ್ನು ಮಾರತಪ್ಪ ಎನ್ನುವವರಿಗೆ ಹೇಳಿ ಬರೆಯಿಸಿರುತ್ತೇನೆ. ಆರೋಪಿತರು ನನ್ನ ಮಗಳಿಗೆ ತೊಂದರೆ ಕೊಡುತ್ತಿದ್ದ ಬಗ್ಗೆ ನಾನು ವಡಗೇರಾ ಪೊಲೀಸರ ಠಾಣೆಗೆ ಹೋಗಿ ದೂರು ಕೊಟ್ಟಿರುವುದಿಲ್ಲ. ತಾಯಪ್ಪ ಎನ್ನುವರ ಮನೆಯಲ್ಲಿ ನಮ್ಮ ಮಗಳನ್ನು ಬಿಟ್ಟಿರುತ್ತೇನೆ. ರಬ್ಬರ್ ಸ್ಟೇಷನ ನೌಷಿನ ನೇಕ ಏರಿಯಾದಲ್ಲಿ ಇರುತ್ತದೆ. ನನ್ನ ಮಗಳನ್ನು ಮುಂಬೈಯಿಂದ ಬೆಂಗಳೂರಿಗೆ ಆರೋಪಿತರು ಕರೆದುಕೊಂಡು ಹೋಗಿರುವುದಕ್ಕೆ ನಾನು ದೂರು ಕೊಟ್ಟಿರುವುದಿಲ್ಲ. ನನ್ನ ಮಗಳನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಪೊಲೀಸರಿಗೆ ದೂರು ಕೊಟ್ಟಿರುವುದಿಲ್ಲ. ನಮ್ಮ ಮನೆಯ ಆಜುಬಾಜು ಹಾಗೂ ನಮ್ಮ ಕುಲಸ್ಥರು ವಿದ್ಯಾವಂತರ ಇರುತ್ತಾರೆ. ಹೆಲ್ಪ ಲೈನಗೆ ಪೋನ ಮಾಡಿ ನನ್ನ ಮಗಳನ್ನು ಹುಡುಕಿಕೊಂಡಿ ಎಂದು ಕೇಳಿರುವುದಿಲ್ಲ. ನಿ.ಪಿ.1 ರಲ್ಲಿ ನಮ್ಮ ಮಗಳನ್ನು ನಾವು ಯಾವ ತಾರೀಖಿಗೆ ಕರೆದುಕೊಂಡು ಹೋಗಿ ಬಿಟ್ಟಿರುತ್ತೇವೆ ಎಂದು ನಿಪಿ.1 ರಲ್ಲಿ ನಮೊದಿಸಿರುವುದಿಲ್ಲ, ಅದೇ ರೀತಿ ನಮ್ಮ ಮಗಳನ್ನು ಯಾವ ಪೋನ ನಂಬರನಿಂದ ಪೋನ ಮಾಡಿದ್ದಳು ಎಂದು ಆ ಪೋನ ನಂಬರ ನಿ.ಪಿ.1 ರಲ್ಲಿ ಬರೆದಿರುವುದಿಲ್ಲ. ನನ್ನ

ಮಗಳು ನನ್ನ ಗಂಡನ ಪೋನಿಗೆ ಪೋನ ಮಾಡಿದ್ದಳು ಸದರಿ ವಿಷಯವನ್ನು ನಿ.ಪಿ.1 ರಲ್ಲಿ ಬರೆಯಿಸಿರುವುದಿಲ್ಲ. ನಾನು ಕಷ್ಟದಲ್ಲಿ ಇದ್ದುದಕ್ಕಾಗಿ ಮಾರಾತಪ್ಪ ಎಲ್ಲವನ್ನು ಸೃಷ್ಟಿ ಮಾಡಿರುತ್ತಾನೆ ಎಂದರೆ ಸರಿ. ನನಗೆ ದಿನಾಂಕಗಳು ಹೇಳಲು ಬರುವುದಿಲ್ಲ. ನಾನು ಬೆಂಗಳೂರಿಗೆ ದುಡಿಯಲು ಹೋಗಿ ಅಲ್ಲೆ ಇರುತ್ತೇನೆ. ಆರೋಪಿತನು ನನ್ನ ಮಗಳಿಗೆ ನಮ್ಮ ಊರಿನಲಿಲ ಕಿರುಕುಳ ಕೊಟ್ಟಿರುತ್ತಾನೆ ಅವರ ಕಿರುಕುಳ ಬಹಳ ಆಗಿರುತ್ತದೆ ಎಂದು ನಾನು ಪೊಲೀಸ ಠಾಣೆಗೆ ಹೋಗಿ ದೂರು ಕೊಟ್ಟಿರುವುದಿಲ್ಲ. ನನ್ನ ಮಗಳು ಕ್ರಿಮಿನಾಶಕ ಸೇವಿಸಿದಂತಹ ಮಾಡಿದ ದಿನ ನಾನು ಇಂದವರ ತೊಂದರೆಯಿಂದ ವಿಷ ಕುಡಿದಿರುತ್ತಾಳೆ ಎಂದು ಪೊಲೀಸ ಠಾಣೆಗೆ ಹೋಗಿ ದೂರು ಕೊಟ್ಟಿರುವುದಿಲ್ಲ. ನನ್ನ ಮಗಳು ಮೃತ ಪಟ್ಟ ಮರುದಿನ ದೂರು ಕೊಟ್ಟಿರುತ್ತೇನೆ. ನನ್ನ ಮಗಳು ಸತ್ತ ಮೇಲೆ ಯಾರ ಯಾರ ಹೆಸರು ಸೇರಿಸಬೆಕೆಂದು ನಾವು ವಿಚಾರ ಮಾಡಿ ಅವರ ಹೆಸರುಗಳನ್ನು ಸೇರಿಸಿರುತ್ತೇವೆ. ನನ್ನ ಅಣ್ಣತಮ್ಮಂದಿರು ಆರು ಜನ ಇರುತ್ತಾರೆ. ನನ್ನ ಕೊನೆಯ ತಮ್ಮನ ಹೆಸರು ಶಾಂತಪ್ಪ ಎಂದು ಇದ್ದು ಆತನಿಗೆ ಈಗ 20-25 ವರ್ಷದವನು ಇರುತ್ತಾನೆ. ನನ್ನ ತಮ್ಮ ಶಾಂತಪ್ಪನಿಗೆ ನನ್ನ ಮಗಳನ್ನು ಕೋಡಬೆಕೆಂದು ವಿಚಾರ ಮಾಡಿದ್ದೇವು ಎಂದರೆ ಸರಿಯಲ್ಲ. ನನ್ನ ಮಗಳಿಗೆ ಹೊಟ್ಟೆ ಬೇನೆ ರೋಗ ಇದ್ದು ಅದಕ್ಕಾಗಿ ನನ್ನ ತಮ್ಮ ಶಾಂತಪ್ಪ ನನ್ನ ಮಗಳನ್ನು ಮದುವೆ ಮಾಡಿಕೊಳ್ಳಲು ನಿರಾಕರಿಸಿರುತ್ತಾನೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ನನ್ನ ತಮ್ಮ ಅವಿಧ್ಯಾವಂತನು ಇದ್ದು ಆತನನ್ನು ನನ್ನ ಮಗಳು ಮದುವೆ ಮಾಡಿಕೊಳ್ಳಲು ನಿರಾಕರಿಸಿರುತ್ತಾಳೆ ಎಂದರೆ ಸರಿಯಲ್ಲ. ನಾನು ನನ್ನ ಮಗಳಿಗೆ ಇಂತಹವರನ್ನೆ ಕಿರಿಕಿರಿ ಕೋಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಗಳನ್ನು ಆರೋಪಿತನು ಒತ್ತಾಯ ಪೂರ್ವಕವಾಗಿ ಬೊಂಬಾಯಿಗೆ ಕರೆದುಕೊಂಡು ಹೋಗಿ ಬೊಂಬಾಯಲ್ಲಿ ನನ್ನ ಮಗಳನ್ನು ಅಥವಾ ನಾವಾಗಲಿ ದೂರು ಕೋಡುತ್ತಿದ್ದೇವು ಎಂದರೆ ಸರಿಯಲ್ಲ. ಅದಕ್ಕಾಗಿ ನಾಗರಾಜ ನನ್ನ ಮಗಳನ್ನು ಪ್ರೀತಿ ಮಾಡಿರುತ್ತಾನೆ ಎಂದು ಮತ್ತು ಉಳಿದ ಆರೋಪಿತರು ನನ್ನ ಮಗಳನ್ನು ಕರೆದುಕೊಂಡು ಹೋಗಿರುತ್ತಾರೆ ಎಂದು ನಾನು ಮತ್ತು ಮಾರಾತಪ್ಪ ಸೇರಿ ಈ ಸುಳ್ಳು ಕೇಸನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮಗಳಿಗೆ ಕಿರುಕುಳ ಕೋಡುತ್ತಿದ್ದರೆ ನಾನೇ ವಡಗೇರಾ ಪೊಲೀಸ ಠಾಣೆಗೆ ಹೋಗಿ ದೂರು ಕೋಡುತ್ತಿದ್ದೆ ಎಂದರೆ ಸರಿ.

- ಈ ಹಂತದಲ್ಲಿ ನ್ಯಾಯಾಲಯದ ಸಮಯ ಆಗಿದ್ದರಿಂದ ಹೆಚ್ಚಿನ ಪಾಟೀ ಸವಾಲಿಗಾಗಿ ಮುಂದುಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.

Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 98/2019

ಪ್ರಾ.ಸಾ. 2 ಚಾ.ಸಾ 2

| | | |
|---|---|---|
| ಹೆಸರು | : | ಮಲ್ಲಪ್ಪ |
| ತಂದೆಯ ಹೆಸರು | : | ಶಿವಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಹಾಲಗೇರಾ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 09-01-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-1 ಮತ್ತು 3 ರವರ ಪರಿಚಯ ಇರುತ್ತದೆ. ಚಾಸಾ-3 ಸೈದಪ್ಪ ಇವರು ಒಂದು ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ದಿಃ 19. 12 ತಿಂಗಳು ಸುಮಾರು 5-6 ತಿಂಗಳ ಹಿಂದೆ ಚಾಸಾ-1 ರವರ ಮನೆಗೆ ಕರೆಯಿಸಿದ್ದರು. ಸಂಜೆ 5.00-6.00 ಗಂಟೆ ಸುಮಾರು ಪಂಚನಾಮೆ ಮಾಡಿರುತ್ತಾರೆ. ಚಾಸಾ-1 ರವರ ಮಗಳು ಮೃತಪಟ್ಟಿರುತ್ತಾಳೆ ಎಂದು ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿದಾರರಿಗೆ ಈಗ ಪಂಚನಾಮೆ ತೋರಿಸಲಾಗಿದ್ದು ಅದನ್ನು **ನಿ.ಪಿ.2** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.2(ಎ)** ಎಂದು ಗುರುತಿಸಲಾಯಿತು. ಇಷ್ಟನ್ನು ಹೊರತು ಪಡಿಸಿ ಬೇರೆ ಏನು ಮಾಡಿರುವುದಿಲ್ಲ. ಸ್ಥಳದಲ್ಲಿ ಇದ್ದಂತಹ ವಿಷದ ಬಾಟಲಿಯನ್ನು ಪೊಲೀಸರು ವಶಪಡಿಕೊಂಡಿರುತ್ತಾರೆ. ಸದರಿ ಬಾಟಲಿಯನ್ನು ಸಾಕ್ಷಿದಾರರಿಗೆ ತೊರಿಸಲಾಗಿದ್ದು ಅದನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ.ಸಿ.ಎಸ್.ಎಮ್. ವಕೀಲರಿಂದ

2. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ಚಾಸಾ-1 ನನ್ನ ಚಿಕ್ಕಮ್ಮಳಾಗಿರುತ್ತಾಳೆ. ಚಾಸಾ-3 ಸೈದಪ್ಪ ಇವರು ನನ್ನ ಚಿಕ್ಕಪ್ಪನಾಗಿರುತ್ತಾನೆ. ಚಾಸಾ-7 ಇವರು ಚಾಸಾ-1 ರವರ ಗಂಡನಾಗಿರುತ್ತಾರೆ. ಚಾಸಾ-8 ರಿಂದ 10 ರವರು ಚಾಸಾ-1 ರವರ ಮಕ್ಕಳಾಗಿರುತ್ತಾರೆ. ಚಾಸಾ-11, 12 ರವರು ನನ್ನ ಚಿಕ್ಕಪ್ಪಂದಿರು ಆಗಿರುತ್ತಾನೆ. ಪೊಲೀಸರಿಗೆ ನಾನು ಪಂಚನಾಮೆ ಮಾಡಿ ಎಂದು ಹೇಳಿ ಬರೆಯಿಸಿರುವುದಿಲ್ಲ. ಪೊಲೀಸರು ಬಂದು ಕರೆದ ಮೇರೆಗೆ ಅವರು ಬರೆದಂತಹ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಚಾಸಾ-4, 7 ಇವರು ಸಹಿ ಮಾಡು ಎಂದು ಹೇಳಿದ್ದರಿಂದ ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಮು.ಮಾ.1 ರಂತಹ ಔಷಧಿ ಬಾಟಲು ಒಕ್ಕಲುತನ ಮಾಡುವ ರೈತರ ಮನೆಯಲ್ಲಿ ಸಾಮಾನ್ಯವಾಗಿ ಇರುತ್ತವೆ ಎಂದರೆ ಸರಿ. ನಾನು ಅಲ್ಲಿಗೆ ಹೋಗುವುದಕ್ಕಿಂತ ಪೂರ್ವದಲ್ಲಿ ಪೊಲೀಸರು ಅಲ್ಲಿಗೆ ಬಂದಿದ್ದರು. ಮು.ಮಾ.1 ನ್ನು ಯಾರು ತಂದು ಕೊಟ್ಟಿರುತ್ತಾರೆ ಅದು ಎಲ್ಲಿ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ಭಾವಚಿತ್ರ ತೆಗೆದ ಬಗ್ಗೆ ನನಗೆ ನೆನಪಿರುವುದಿಲ್ಲ. ನಾನು ವಡಗೇರಾ ಪೊಲೀಸ ಠಾಣೆಗೆ ಹೋಗಿದ್ದೆ. ನಿ.ಪಿ.2 ಕ್ಕೆ ವಡಗೇರಾ ಪೊಲೀಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮನೆಯಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. 4-5 ಪೇಪರ ಮೇಲೆ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ ಎಂದರೆ ನನಗೆ ನೆನಪಿರುವುದಿಲ್ಲ. ನಾನು, ಚಾಸಾ-1, ಚಾಸಾ-3 ಪೊಲೀಸ ಠಾಣೆಗೆ ಹೋಗಿ ಸಹಿ ಮಾಡಿ ಬಂದಿರುತ್ತೇವೆ ಎಂದರೆ ಸರಿ. ಈ ಕೇಸಿನ ಬಗ್ಗೆ ಏನ ಮಾಹಿತಿ ಇಲ್ಲದಿದ್ದರು ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.